14. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರ್‌ಟೆಂಡೆಂಟರ ಆಫಿಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

15. ಈ ಕಂಟ್ರಾಕ್ಟುಗಳು ಮೈಸೂರ ಜೈಲ್ ಇನ್‌ಸ್ಪೆಕ್ಟರ್ ಜನರಲ್‌ರವರ ಪುಂಜೂರಾತಿಗೆ ಒಳಪಟ್ಟು ಇರುವವು.

16. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗೆದುಕೊಂಡ ತರುವಾಯ ತಮ್ಮ ಕರಾರಿನಂತೆ ನಡೆಯಲು ಇಷ್ಟ ಪಡದಿದ್ದರೆ, ಒಂದು ತಿಂಗಳಿಗೆ ಮುಂಚಿತವಾಗಿಯೇ ನೋಟಿಸ್ ಕೊಡಬೇಕು, ಮತ್ತು ಅವರ ಸೆಕ್ಯೂರಿಟಿ ಹಣವನ್ನು ಸರಕಾರಕ್ಕೆ ಬಿಟ್ಟುಬಿಡಬೇಕು.

17. ಇಜಾರೆದಾರರು ತಪ್ಪಿ ಹೋಗುವುದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನೂ ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಪದಾರ್ಥಗಳನ್ನೂ ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚುದರದ ಮೇರೆ ಬಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನೂ ಇಜಾರೆದಾರರು ಸರ್ಕಾರಕ್ಕೆ ಭರ್ತೀಮಾಡಿ ಕೊಡಬೇಕು. ವಿಚಾರ—ಮೇಲೆ ನಮೂದಾದ ಕಂಟ್ರಾಕ್ಟುಗಳ ವಿಷಯದಲ್ಲಿ ಯಾವ ವಿಧವಾದ ರಿಸಾಯಿತಿಯೂ ದೊರೆಯಲಾರದು.

ಡಿ. ಎ. ಜೋಕ್ಸ್,
ಬೆಂಗಳೂರ್ ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟ್.

ಕೋಲಾರ್ ಡಿಸ್ಟ್ರಿಕ್ಟ್.

ತಾರೀಖು 13ನೇ ಏಪ್ರೆಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

I. ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ಸಬ್ ಡಿವಿಜನಿಗೆ ಕೇರದ ಗೋರೀಬಿದನೂರು ತಾಲ್ಲೂಕಿನಲ್ಲಿ ಅಫಿಫಿಯಲ್ ಸಾಲ್ ಅಂದರೆ 1896ನೇ ಇಸವಿ ಜುಲೈ ಲಾಗಾಯತು 1897ನೇ ಇಸವಿ ಜೂನ್ ಆಖೈರವರಿಗೆ ಕುರಂಗದ ಕಲ್ಲುಗಳನ್ನು ಜಮಾಯಿಸಿಕೊಳ್ಳತಕ್ಕ ಹಕ್ಕುದಾರಿಯನ್ನು ಸದರಿ ತಾಲ್ಲೂಕು ಕಚೇರಿಯಲ್ಲಿ 1896ನೇ ಇಸವಿ ಮೇ ಮಾಹೆ 28ನೇ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

II. ಸದರಿ ಹರಾಜು ಸದರಿ ತಾರೀಖು ಬೆಳಿ 11 ಘಂಟೆಗೆ ಅಮಲ್‌ದಾರ್ ಯಾ ಶಿರಸ್ತೇದಾರ್‌ರಿಂದಲಾಗಲಿ ಹರಾಜು ಪ್ರಾರಂಭ ಮಾಡಲ್ಪಡುವದು.

III. ಸದರಿ ಹರಾಜು ಚಿಕ್ಕಬಳ್ಳಾಪುರ ಸಬ್ ಡಿವಿಜ್ ಆಫಿಸರವರ ಮಂಜೂರಾತಿಗೆ ವಳಪಟ್ಟದ್ದಾಗಿರುತ್ತೆ.

IV. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಅಥವಾ ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುತ್ತಾರೆಯೇ ನಮೂದಿಸಬೇಕು ಮತ್ತೊಬ್ಬರಿಗೋಸ್ಕರವಾದರೆ ಅಂಥಾವರ ಬರಹಮೂಲಕವಾದ ಅಧಿಕಾರ ಪತ್ರಿಕೆಯನ್ನು ಅಂದರೆ ಅವರ ದಸ್ಕತ್ತು ಇರತಕ್ಕ ಕಾಗದವನ್ನು ಹಾಜರ್‌ಮಾಡಬೇಕು ಇಲ್ಲವಾದರೆ ಅಂಥಾವರ ಸವಾಲನ್ನು ಅಂಗೀಕರಿಸುವದಿಲ್ಲ.

ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗು ಡಿಪಾಜಿಟ್ ಇಡಬೇಕು ಹರಾಜು ಮಂಜೂರ್‌ಮಾಡಲ್ಪಟ್ಟ ಸಂಗತಿ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಕ್ರಯದ ಮೊಬಲಗ್ ಮೇಲೆ ರೂಪಾಯಿ 1ಕ್ಕೆ 1 ಆಣೆ ಮೇರೆಗೆ ಆಗುವ ಲೋಕಲ್‌ಸೆಸ್ ದೇಖೀಲ್ ಬಾಕಿ ಮೊಬಲಗನ್ನು ಪಾವತಿ ಮಾಡಬೇಕು ಹಾಗೆ ಡಿಪಾಜಿಟ್ ಮೊಬಲಗೇ ಆಗಲಿ ಪೂರಾ ಮೊಬಲಗೇ ಆಗಲಿ ಕೊಡದೆ ತಪ್ಪಿದರೆ ಡಿಪಾಜಿಟ್ ಮೊಬಲಗು ಕೊಟ್ಟು ಬಾಕಿ ಮೊಬಲಗು ಕೊಡದೆ ತಪ್ಪಿದರೆ ಡಿಪಾಜಿಟ್ ಮೊಬಲಗು ದಂಡವಾಗಿ ಸರಕಾರಕ್ಕೆ ಸೇರಿಸಿಕೊಂಡು ಹರಾಜು ಹಕ್ಕುದಾರಿಯನ್ನು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು.

ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕಲ್ಲುಗಳನ್ನ ಅವನ ಅನುಮತಿ ವಿನಾಯಿ ತೆಗದುಕೊಳ್ಳಿಕೂಡದು ಈ ಜಮೀನಿನ ಹಿಡುವಳಿದಾರನಾದರೂ ಸ್ವಂತ ಉಪಯೋಗಕ್ಕೋಸ್ಕರವಾಗಿ ಜಮಾಯಿಸತಕ್ಕದ್ದಲ್ಲ ಆದರೆ ಜಮಾಯಿಸತಕ್ಕ ಕಲ್ಲುಗಳನ್ನ ಇಜಾರೇದಾರನಿಗೆ ಕೊಡಬೇಕೇ ಹೊರ್ತು ಮತ್ತೊಬ್ಬರಿಗೆ ಕೊಡತಕ್ಕದ್ದಲ್ಲ.

ಇಜಾರೆದಾರನು ಹುಲ್ಲುಬನ್ನಿ ಇಜಾರೆದಾರನ ಜರೂರ್ ಹಕ್ಕಿನಲ್ಲಿ ಪ್ರವೇಶಿಸಕೂಡದು ಇಜಾರೆದಾರನಿಗೆ ಇಜಾರೆ ಮಾಡಿಕೊಂಡು ಇರುವ ಪ್ರದೇಶದಲ್ಲಿ ಇರತಕ್ಕ ಕಲ್ಲುಗಳನ್ನ ಜಮೀನಾಯಿಸಿಕೊಳ್ಳತಕ್ಕ ಹಕ್ಕು ಮಾತ್ರ ಇರತಕ್ಕದ್ದಾಗಿರುತ್ತೆ ಪರಂತು ಬಂಜರು ಜಮೀನುಗಳನ್ನ ಸಾಗುವಳಿ ಬಗ್ಗೆ ಕೊಡುವದಕ್ಕೋಸ್ಕರ ಬರುವ ದರಖಾಸ್ತುಗಳಿಗೆ ಇಜಾರೆದಾರನ ಅಭ್ಯಂತರವೇನೂ ಇಲ್ಲ.

ಇಜಾರೆದಾರನು ಕಲ್ಲುಗಳಿಗೋಸ್ಕರ ಜಮೀನುಗಳನ್ನ ಅಗಿಯಕೂಡದು ಬಂದು ವ್ಯಾಳ ಆಗದಲ್ಲಿ ಸಾಗುವಳಿ ಲಾಯಖಾಗುವಂತೆ ಗುಣಿಗಳನ್ನ ಮುಚ್ಚಿಸಬೇಕು ಇಜಾರೆದಾರನು ಯಾವ ಪ್ರದೇಶದಲ್ಲಿ ಜಮಾಯಿಸುತ್ತಾನೆಯೋ ಗ್ರಾಮ ಕಲ್ಲಿನ ಪೊತ್ತ ಯಾವ ಸ್ಥಳಕ್ಕೆ ರವಾನೆ ಮಾಡುತ್ತಾನೋ ಈ ವಗೈರೆ ತಪ್ಪೀಲ್ ಕಂಡು ಅಮಲ್‌ದಾರ್‌ರಿಂದ ಮಾಫಿ ಲೈಸೆನ್ಸು ಪಡದು ರವಾನಿಸಬೇಕು ಲೈಸೆನ್ಸು ಇಲ್ಲದೆ ರವಾನಿಸಕೂಡದು ಈ ಮೇರಿಗೆ ತಿಳಿಯಪಡಿಸಿ ಇಧೆ.

ಬಿ. ಜಿ. ಕೃಷ್ಣಯ್ಯಂಗಾರ್,
ಆ|| ಡೆಪ್ಯುಟಿ ಕಮ್ಮಿಷನರ್.

ಮೈಸೂರ್ ಡಿಸ್ಟ್ರಿಕ್ಟ್.

ಪ್ರಕಟನೆ.

ತಾರೀಖು 6ನೇ ಮೇ 1896.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದರಡಿಯಲ್ಲಿ ಕಂಡ ಹೋಬಳಿಗಳಲ್ಲಿ ಸಂದಲ್ ಮರಗಳನ್ನು ಬೇರು ಸಮೇತವಾಗಿ ಕೀಳಿಸಿ ಪೊಟ್ಟಕೆತ್ತನೆ ಮಾಡಿ ಆಯಾ ಹೋಬಳಿಗಳಿಗೆ ಬಾಜೂದಲ್ಲಿ ತೋರಿಸಿರುವ ಕೋರಿಗಳಿಗೆ 1896ನೇ ಇಸವಿ ಅಕ್ಟೋಬರ್ ಆಖೈರ್ ವಳ

ಗಾಗಿ ಸಾಗಿಸುವದಕ್ಕೊಸ್ಕರ ದರಖಾಸ್ತುಗಳನ್ನು ಮೈಸೂರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು 1896ನೇ ಇಸವಿ ಜೂನ್ ತಾರೀಖು 15ರ ವರಿಗೆ ತಗದುಕೊಳ್ಳುತ್ತಾರೆ.

ತಾಲ್ಲೂಕು.	ಹೋಬಳಿ.	ಕೋಠಿ.	ಮೊತ್ತ.
ಹುಣಸೂರು	ಪಟ್ಟದಪುರ	ಹುಣಸೂರ್	50 ಟನ್
ಹೆಗ್ಗಡದೇವನಕೋಟೆ	ಚಿಕ್ಕಹಳ್ಳಿ	ಡಿಟೋ	50 ಟನ್
ಗುಂಡ್ಲು	ರಾಘವಾಪುರ	ಶ್ರೀರಂಗಪಟ್ಟಣ	25 ಟನ್
ಚಾಮರಾಜನಗರ	ಸಂತೆಮರಹಳ್ಳಿ	ಡಿಟೋ	25 ಟನ್
ಮೈಸೂರು	ಸಿಂದವಳ್ಳಿ	ಡಿಟೋ	25 ಟನ್

2. ತಮ್ಮಾ ದರಖಾಸ್ತುಗಳೂ "ಫಲಾನಾ ಕೋಠಿಗೆ ಫಲಾನಾ ಹೋಬಳಿಯಿಂದ ಸಂದಲ್ ಮರಗಳನ್ನ ಕೀಳಿಸಿ ಪೊರಟು ಕೆತ್ತನೆಯಿಂದ ಸಾಗಿಸಲು ದರಖಾಸ್ತು" ಯಂಬದಾಗಿ ಮೇಲೆ ವಿಳಾಸ ಬರದು ಮೊಹರ್ ಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಹುಣಸೂರು ಮತ್ತು ಹೆಗ್ಗಡದೇವನಕೋಟೆ ಪ್ರತಿ ಬಂದು ಹೋಬಳಿಗೂ 100 ರೂಪಾಯಿ ಮತ್ತು ಇತರ ತಾಲ್ಲೂಕು ಪ್ರತಿ ಬಂದು ಹೋಬಳಿಗೂ 50 ರೂಪಾಯಿ ಬೆಲೆಯುಳ್ಳ ಕರೆನ್ಸೀ ನೋಟುಗಳಿ ಯಾ ಪೈನೋಟುಗಳಿ ರವಾನಿಸಬೇಕು. ದರಖಾಸ್ತುಗಳು 1896ನೇ ಇಸವಿ ಜೂನ್ 16ನೇ ತಾರೀಖಿನಲ್ಲಿ ಹಾಜರು ಇರತಕ್ಕ ದರಖಾಸ್ತುದಾರ ಯಾವನಿಗೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಪಡೆಯಲ್ಪಟ್ಟ ಕರೆನ್ಸೀ ನೋಟುಗಳು ವಾಪಸು ಮಾಡಲ್ಪಡುವವು.

3. ಪ್ರತಿ ದರಖಾಸ್ತುಸಲ್ಲಿಯೂ ಮರಗಳನ್ನ ಕೀಳಿಸಿ ಪೊರಟು ಕೆತ್ತನೆ ಮಾಡಿಸುವದಕ್ಕೆ ಸರಮಾಕ್ಕೆ ಮತ್ತು ತಲೆ ಕೊನೆಗಳಿಗೆ ಪ್ರತ್ಯೇಕವಾಗಿ ದರ ಟನ್ ಬಂದಕ್ಕೆ ಇಷ್ಟೆಂದು ದರ ನಮೂದಿಸಬೇಕು. ಮತ್ತು ಕೋಠಿಗೆ ರವಾನಿಗೆ ದರ ಟನ್ ವಂದಕ್ಕೆ ಜಂಗಲ್ ಮೈಲಿ ವಂದಕ್ಕೆ ಇಷ್ಟುದರ ವೆಂತಲೂ ಮತ್ತು ಹೈ ರೋಡು ಮೈಲಿ ವಂದಕ್ಕೆ ಯಿಷ್ಟು ದರ ವೆಂತಲೂ ಪ್ರತ್ಯೇಕವಾಗಿ ನಮೂದಿಸಬೇಕು.

4. ಯಲ್ಲಾ ಮರಗಳೂ ತಾಯಿಬೇರು ಕಾಲುಬೇರು ಮತ್ತು ಪಕ್ಕದ ಬೇರುಗಳ ಪೊಂಬಿಗೆ ಕೀಳಿಸಲ್ಪಡಬೇಕು. ಜವಿಸಿನಿಲ್ಲ ಜೇಗು ಇರತಕ್ಕ ಮರಗಳು ಯಾವದೂ ಬಿಡಲ್ಪಡಕೂಡದು. ಮರಗಳ ರಂಬೆಗಳು ಕೊಡ್ಲಿಯಿಂದ ಕತ್ತರಿಸಲ್ಪಡಕೂಡದು. ಗರಗಸದಿಂದ ಕೊಯ್ಯಲ್ಪಡಬೇಕು. ಬೇರಿನಲ್ಲಿ ಇರತಕ್ಕ ಮಣ್ಣು ಮತ್ತು ಕಲ್ಲು ಚನ್ನಾಗಿ ತೆಗಿಯಲ್ಪಡಬೇಕು. ಮರಗಳ ತಿಪ್ಪೆ ಮತ್ತು ಬೀ ಚಕ್ಕೆಯನ್ನು ಬಹಳ ಹುಷಾರಿನಿಂದ ಪೊದಲು ಮಚ್ಚುಕತ್ತಿಯಿಂದ ಕೆತ್ತಿ ನಂತರ ಪೊಳಿಗಿನ ಜೇಗು ಪೋಲಾಗದಂತೆ ಬಾಚಿಯಿಂದ ಕೆತ್ತಬೇಕು. ಮರದ ಜೇಗಿನ ಮೇಲೆ ಯಾವ ಸಂದರ್ಭದಲ್ಲೂ ಕಾಲಂಗುಲ ದಪ್ಪಕ್ಕಿಂತ ಜಾಸ್ತಿಯಾಗಿ ಬೇರೆ ಮರ ಬಿಡಕೂಡದು. ಬುಡಣಿ ಮತ್ತು ಜೇಗು ಇರತಕ್ಕ ಚಕ್ಕೆ ಮರಗಳಜೊತೇಲೇ ಸಾಗಿಸಲ್ಪಡಬೇಕು.

5. ಒಂದು ಅಂಗುಲಕ್ಕಿಂತ ಜಾಸ್ತಿಯಾಗಿ ಜೇಗುಳ್ಳ ತಿಪ್ಪೆ ತಲೆಗಳು ಜಂಗಲ್‌ಗಳಲ್ಲಿ ಬಿಡಕೂಡದು. ಪೊರಟು ಕತ್ತನೆ ಮಾಡದೆ ಹಾಗೆಯೇ ಕೋಠಿಗೆ ರವಾನಿಸಬೇಕು. ಅಂಥಾ ತಲೆ ಕೊನೆಗಳಿಗೆ ರವಾನೆ ಚಾರ್ಜ್ ಮಾತ್ರ ಪಾವತಿ ಮಾಡಲ್ಪಡುತ್ತೆ.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಪ್ರತಿ ಮಾಜೆಯಲ್ಲೂ ಯಷ್ಟು ಪೊತ್ತಿನವರೆಗೆ ಯಿಂದ ಸಾಗಿಸಲ್ಪಡಬೇಕೆಂದು ವಿಧಾಯಕ ಮಾಡುತ್ತಾರೋ ಅಷ್ಟು ಪೊತ್ತನ್ನು ಖಂಡಿತವಾಗಿ ಕೋಠಿಗಳಿಗೆ ತಯಾರಿಯಿಂದ ರವಾನಿಸಬೇಕು. ಇದಕ್ಕೆ ತಪ್ಪಿದಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಮೊಕರರ್ರ್ಮಾಡಲ್ಪಡುವ ಪೆನಾಲ್ಟಿಗೆ ಗುರಿಯಾಗತಕ್ಕದ್ದು.

7. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರದುಕೊಡುವ ಇರಾರು ಪೇರಿಗೆ ಕ್ರಮವಾಗಿ ನಡೆದುಕೊಳ್ಳುವ ಒಗ್ಗೆ ಜಾಮೀನ್ ತರಕ್ಕ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕು ಪ್ರತಿ ಬಂದು ಜೋಬಿಗೆ 200 ರೂಪಾಯಿನ ಡಿಪಾಜಿಟ್ ಮತ್ತು ಇತರ ತಾಲ್ಲೂಕುಗಳ ಪ್ರತಿ ಬಂದು ಹೋಬಳಿಗೆ 100 ರೂಪಾಯಿನ ಡಿಪಾಜಿಟ್ ಕಟ್ಟಬೇಕು. ಮೇಲ್ಕಂಡ ಪರತ್ತುಗಳ ಪೇರೆ ನಡಿಯಲೂ ತಪ್ಪಿದಲ್ಲಿ ಠೇವಣೀ ಮೊಬಲಗು ಸರಕಾರಕ್ಕೆ ಕೇರಿಕೊಳ್ಳಲ್ಪಡುತ್ತೆ.

8. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

9. ಸಂದಲ್ ಮರಗಳ ಚುನಾವಿಸೋಣ, ಕೀಳುವಿಕೆ ಪೊರಟು ಕೆತ್ತನೆ ಮತ್ತು ಅವೇವಿಷಯಗಳಲ್ಲ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಮಾಡುವ ರೂಲ್ಸ್ ಮತ್ತು ಕಾನೂನುಗಳಿಗೆ ಕಂಟ್ರಾಕ್ಟ್ದಾರನು ಖಂಡಿತವಾಗಿ ಬದ್ಧನಾಗಿ ಇರತಕ್ಕದ್ದು.

10. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ತಮ್ಮ ದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ ಮತ್ತು ಆಂಥಾ ಅಂಗೀಕಾರವು ಫಾರೆಸ್ಟ್ ಕಂಸರ್ವೇಟರ್ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

11. ಪ್ರೊದ್ದೇಶಿಸುವ ಕಂಟ್ರಾಕ್ಟ್ದಾರನು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ತಾರೀಖು ೨೦ನೇ ಮೇ 1896.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಮೈಸೂರ ಡಿಸ್ಟ್ರಿಕ್ಟಿಗೆ ಸೇರಿದ ಇದರಡಿ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಅಕಾರ ಕಂಡ ಜಮೀನುಗಳು ಆಡಗಿರುವ ಸರ್ಕಾರಿ ಬಂಜರ್ ಜಮೀನುಗಳಲ್ಲಿಯೂ, ಅಮೃತಮಹಲ್ ಕಾವಲುಗಳಲ್ಲಿಯೂ, ಹಳೆ ಮತ್ತು ಹೊಸ ಡಿವಾರ್ಕೇಷನ್ ಲೈನುಗಳ ಮಧ್ಯೆ ಇರುವ ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲಿಯೂ, ಗ್ರಾಮು ಬೇಲಿಗಳ ಆವರಾಯಿ, ಮತ್ತು ಅವರಾಯಿ ಬೇಲಿಗಳಲ್ಲಿ ದೊರೆಯುವ ಪಸಾರೆ ಹುಟ್ಟುವಳಿಗಳನ್ನು 1896ನೇ ಇಸವಿ ಜುಲೈ ಮಾಹೆ 1ನೇ ತಾರೀಖು ಲಾಗಾಯತು 1897ನೇ ಇಸವಿ ಜೂನ್ 30ನೇ ತಾರೀಖಿನ ವರಿಗೆ ಜಪಾಯಿಸುವ ಹಕ್ಕು ದಾರಿಯು ಬಹಿರಂಗವಾದ ಹರಾಜು ಮೂಲಕ ತಾಲ್ಲೂಕುವಾರಾಗಿಯಾಗಲಿ ಅಥವಾ ಹೋಬಳಿವಾರಾಗಿಯಾಗಲಿ ಸರಕಾರಕ್ಕೆ ಅನುಕೂಲವಾಗುವ ರೀತಿಯಂತೆ ಈ ಕಳಗೆ ವಿವರಿಸಿರುವ ಆಫಿಸರವರಿಂದ ಈ ಕೆಳಗೆ ಕಂಡ ತಾರೀಖುಗಳಲ್ಲಿ ವಿಕ್ರಯಿಸಲ್ಪಡುವದು.

ಸೂಚನೆ:—ಫಾರೆಸ್ಟ್ ವರ್ಕ್ಟೀಷ್ಗಳೂ, ಸಂದಲ್ ಮತ್ತು ಫಾರೆಸ್ಟ್ ರಿಪ್ರೊಡಕ್ಷನ್ ಬ್ಲಾಕುಗಳೂ, ಇದಕ್ಕೆ ಸೇರಿ ಇರುವದಿಲ್ಲ.

ತಾಲ್ಲೂಕಿನ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡುವ ಆಫಿಸರವರು.
ಮೈಸೂರು	10 6 96	ಮೈಸೂರ ಡಿಸ್ಟ್ರಿಕ್ಟ್ ಆಫಿಸ್ ಬಳಿ.	ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರು
ಯಡತೊರೆ	ಡಿಟೋ	ಡಿಟೋ	ಡಿಟೋ
ಹುಣಸೂರು	ಡಿಟೋ	ಡಿಟೋ	ಡಿಟೋ
ಹೆಗ್ಗಡದೇವನಕೋಟೆ	ಡಿಟೋ	ಡಿಟೋ	ಡಿಟೋ
ಗುಂಡ್ಲುಪೇಟೆ	ಡಿಟೋ	ಡಿಟೋ	ಡಿಟೋ
ಚಾಮರಾಜನಗರ	ಡಿಟೋ	ಡಿಟೋ	ಡಿಟೋ
ನಂಜನಗೂಡು	ಡಿಟೋ	ಡಿಟೋ	ಡಿಟೋ
ತಿ॥ ನರಸೀಪುರ	ಡಿಟೋ	ಡಿಟೋ	ಡಿಟೋ
ಮಂಡ್ಯೆ	13 6 96	ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸಲ್ಲಿ	ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸರವರು
ಮಳವಳ್ಳಿ	ಡಿಟೋ	ಡಿಟೋ	ಡಿಟೋ
ಶ್ರೀರಂಗಪಟ್ಟಣ	ಡಿಟ್ಟೋ	ಡಿಟೋ	ಡಿಟೋ
ಕೃಷ್ಣರಾಜಪೇಟೆ	ಡಿಟೋ	ಡಿಟೋ	ಡಿಟೋ
ನಾಗಮಂಗಲ	ಡಿಟೋ	ಡಿಟೋ	ಡಿಟೋ

ಹುಟ್ಟುವಳಿ ತಪ್ಸೀಲ್.

1. 1 ತಾರೇಕಾಯಿ, 2 ಕೀಗೇಕಾಯಿ, 3 ಅರಟವಾಳದ ಕಾಯಿ, 4 ದಿಂಡಿಗದಗೋಂದು, 5 ಕಾಡಅಕ್ಕಿನ, 6 ಜೇನುಮೇಣ, 7 ಜೇನುತುಪ್ಪ, 8 ಕಪಿಲಾರಂಗು, 9 ಪತಂಗ, 10 ಮಡ್ಡಿ, 11 ಬಿಲ್ಲದ ಬೀಜ, 12 ಹಾಲುಮಡ್ಡಿ, 13 ಚಿಗಚಕ್ಕೆಬೀಜ, 14 ಹೊಂಗೇ ಬೀಜ, 15 ಗೇರುಬೀಜ, 16 ಆವರಿಕೆಗೋಂದು, 17 ಸಾರಗದಕೊಂಬು, 18 ಗುಗ್ಗಳ, 19 ಅಳಲೇಕಾಯಿ, 20 ಬೇಲದಹಣ್ಣು, 21 ಅರಗು, (ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ತಾಲ್ಲೂಕುಗಳದು ವಿನಹ) 22 ಶೀತಾಫಲದ ಹಣ್ಣು, 23 ಪೆಂಡೆನಾರು.

2. ಚಡದರಖಾಸ್ತುದಾರನು ಹರಾಜು ಖೈದಾದ ಕೂಡಲೆ ಹರಾಜು ಮೊಬಲಗು ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಠೇವಣಿ ಕಟ್ಟುತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಕೂಡ್ಲೆ ಬಾಬು ಎರಡನೇ ದಫ ಹರಾಜು ಮಾಡಲ್ಪಟ್ಟು ಆದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

3. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು 1896ನೇ ಜುಲೈ ತಾರೀಖು 1ರಲ್ಲಿ ಬಾಬು ರೂಢಿಸಿಕೊಳ್ಳಲು ಪ್ರವೇಶಿಸತಕ್ಕದ್ದು; ಮತ್ತು ಕಂಟ್ರಾಕ್ಟು ಮೊಬಲಗ್ ಪೈಕಿ ಉಳಿದ ಮೊಬಲಗನ್ನೂ ಮತ್ತು ಕಂಟ್ರಾಕ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಬಂದಾಣಿಯಂತೆ ಆಗುವ ಲೋಕಲ್‌ಸೆಸ್ ಮೊಬಲಗನ್ನೂ ಸಹ ಮೂರು ಸಮನಾದ ಖಿಸ್ತುಗಳಲ್ಲಿ ಅಂದರೆ—

1896ನೇ ಡಿಸೆಂಬರ್ 1ನೇ ತಾರೀಖು.

1897ನೇ ಜನವರಿ 1ನೇ ತಾರೀಖು.

1897ನೇ ಫಿಬ್ರವರಿ 1ನೇ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು. ಕ್ಲಿಪ್ತವಾದ ತಾರೀಖುಗಳಲ್ಲಿ ಖಿಸ್ತುಗಳನ್ನು ಪಾವತಿ ಮಾಡದೆ ಇದ್ದಲ್ಲಿ ಕೇಕಡಾ ಸಾಲಿಯಾನಾ 6 ರೂಪಾಯಿ ಮೇರೆ ಬಡ್ಡಿ ಕಟ್ಟಲ್ಪಡುತ್ತೆ. ಮತ್ತು ಮೊಬಲಗನ್ನು ಅವನ ಆಸ್ತಿಯಿಂದ ವಿಲೇ ಮಾಡಿಕೊಳ್ಳುತ್ತೆ.

4. ಕಂಟ್ರಾಕ್ಟುದಾರನು ಯಾವ ಬಂದು ಖಿಸ್ತನ್ನು ಪಾವತಿಮಾಡದೆ ತಪ್ಪಿದರೂ, ಅಥವಾ ಪಾವತಿ ಮಾಡಲು ಸಾವಕಾಶ ಮಾಡಿದರೂ 1897ನೇ ಜೂ॥ ಆಖೈರುವರಿಗೆ ಉಳಿದಿರುವ ಕಾಲದಲ್ಲಿ ಬಾಬು ಜಮಾಮಿಸುವದಕ್ಕೂ ಹರಾಜು ಮಾಡಲ್ಪಡುವದು; ಅಥವಾ ಅಮಾನಿಯಲ್ಲಿ ರೂಢಿಸಲ್ಪಡುವದು. ಪರಂತು ತಪ್ಪಿಹೋದ ಕಂಟ್ರಾಕ್ಟುದಾರನು ಅದರಿಂದ ಉಂಟಾಗುವ ನಷ್ಟಕ್ಕೆ ಗುರಿಮಾಡಲ್ಪಡುವನು.

5. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಆಮರಾಯಿಗಳಲ್ಲಿ ದೊರೆಯುವ ಫಸಲನ್ನು ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಂದಾರರ ಸ್ಥಿರವಟ್ಟು ಹಕ್ಕುದಾರಿ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

ಬಿ. ಕೆ. ವೆಂಕಟವರದಯ್ಯಂಗಾರ್,
ಡೆಪ್ಯೂಟಿ ಕಮ್ಮಿಷನರ್.

ಮೈಸೂರ ಡಿಸ್ಟ್ರಿಕ್ಟು ಫಾರೆಸ್ಟ್ ಡಿಪಾರ್ಟ್‌ಮೆಂಟ್.

ನೋಟಿಫಿಕೇಷ್ಯನ್.

ತಾರೀಖು 1ನೇ ಮೇ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯುವಡಿಸುವದೇನಂದರೆ,—ಮೈಸೂರ ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟ್ ಬೂಬತು ಈ ಕೆಳಗೆ ವಿವರಿಸಿರುವ ಪಸಾರೇ ಜಿನಸಿಗಳು ಸ್ಯ 1896ನೇ ಇಸವಿ ಮೇ ತಾರೀಖು 25ರಲ್ಲು ಮೈಸೂರ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ಮೈಸೂರು ವ್ಹಿಯಾರಡಿನಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಜಿನಸೀ ತಪ್ಸೀಲ್.	ಸುಮಾರು ಮೊತ್ತ.	
	ಮಣ.	ಪಾ.
ಜೇನುಮೇಣ	6	7
ಜೇನುತುಪ್ಪ	3	24
ಅಳಲೇಕಾಯಿ	1,500	..
ಸಾರಗನಕೊಂಬು	9	13
ದಿಂಡಿಗದಗೋಂದು	39	23
ಅರಗು	100	..
ಶೀಗೇಕಾಯಿ	20	..
ಕಾಡವೇಕೆ ಕೊಂಬು	1	..

ಷರತ್ತು.—1887ನೇ ಇಸವಿ ಜೂ॥ 18ನೇ ಮಾರ್ಚಿಂ ಮೈಸೂರ ಗೆಜೆಟ್ 287—288ನೇ ಪೇಜಿನಲ್ಲಿ ಫಾಯಿಷ್ ಮಾಡಿರುವ 1887ನೇ ಇಸವಿ ಜೂ॥ 11ನೇ ಮಾರ್ಚಿಂ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ ಸಾಹೆಬರವರ ನೋಟಿಫಿಕೇಷ್ಯನ್ ಮೇರೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.